# ***Form No.4.***

# ***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 11/2024**

**CW8**

**PW5**

| | | |
|---|---|---|
| ಸಾಕ್ಷಿಯ ಹೆಸರು | ಃ | ಕೆ. ಜಯಕರ |
| ತಂದೆ ಹೆಸರು | ಃ | ಶೀನ |
| ಪ್ರಾಯ | ಃ | 46 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ಅಜೆಕಾರು |

ದಿನಾಂಕ **: 22.11.2024** ರಂದು ಪಿಡಬ್ಲ್ಯೂ - 5/ಸಿಡಬ್ಲ್ಯೂ - 8 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ಫೋಟೋದಲ್ಲಿ ನಾನು ಕಾಣುತ್ತಿದ್ದು, ಮಹಜರಿನಲ್ಲಿ ನನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ಈಗಾಗಲೇ ನಿಪಿ - 5 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ - 5(ಬಿ) ಎಂದು, ಫೋಟೋವನ್ನು ನಿಪಿ -

6 ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಸಹಿಯನ್ನು ಮತ್ತು ಫೋಟೋವನ್ನು ನಾಲ್ಕು ವರ್ಷದ ಹಿಂದೆ ಪೋಲೀಸರು ಸ್ಥಳಕ್ಕೆ ಬಂದಾಗ ಸಹಿ ಮಾಡಲು ಹೇಳಿದಾಗ ನಾನು ಸಹಿ ಮಾಡಿರುತ್ತೇನೆ ಮತ್ತು ಸದರಿ ಸ್ಥಳದಲ್ಲಿ ಫೋಟೋ ತೆಗೆಯಲಾಗಿರುತ್ತದೆ. ನಿಪಿ - 5 ರಲ್ಲಿ ಏನು ಬರೆದಿದೆ ಎಂದು ಮತ್ತು ನಿಪಿ - 6 ನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ತಿಳಿದಿಲ್ಲ. ಸ್ಥಳದಲ್ಲಿ ಪೋಲೀಸರು ಮಹಜರು ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಹಿರಿಯ ಸ.ಸ.ಅ. ರವರಿಂದಃ

ದಿಃ28.10.2020 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 7 ರವರನ್ನು ಮರ್ಣೆ ಗ್ರಾಮದ ಸೌತ್ ಇಂಡಿಯಾ ಕ್ಯಾಶ್ಯೂ ಫ್ಯಾಕ್ಟರಿಗೆ ಕರೆಸಿದ್ದರು ಎಂದರೆ ನಾವು ಸ್ಥಳದಲ್ಲಿ ಇದ್ದೆವು. ಸದರಿ ಸ್ಥಳದಲ್ಲಿ ಗಿರೀಶ್ ಕಾಮತ್ ರವರು ಕಳ್ಳತನ ಮಾಡಿದ ಸ್ಥಳ ಇದೇ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಅಂದರೆ ಮಧ್ಯಾಹ್ನ 2 ರಿಂದ 2.45 ರವರೆಗೆ ಸ್ಥಳದಲ್ಲಿ ಮಹಜರು ಮಾಡಿ, ನಿಪಿ - 5 ನ್ನು ಬರೆದು, ನಿಪಿ - 6 ರಂತೆ ಫೋಟೋ ತೆಗೆದು ನಿಪಿ - 5 ಕ್ಕೆ

ನನ್ನ ಸಹಿಯನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.